<u>ಸಿವಿಲ್  ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>
<u>ನ್ಯಾಯಾಲಯ  ಸವಣೂರು.</u>

ಸಿಸಿ ಸಂಖ್ಯೆ 297/2016

ಪಿಡಬ್ಲ್ಯೂ 08  ಸಿಡಬ್ಲ್ಯೂ: 13
ದಿನಾಂಕಃ 29.11.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ  ಹೆಸರು | - ಮಹೇಶಗೌಡ ಪಾಟೀಲ |
| ತಂದೆ/ಗಂಡನ ಹೆಸರು | - ಗೌಡಪ್ಪಗೌಡ |
| ವಯಸ್ಸು | - 42 ವರ್ಷಗಳು |
| ಉದ್ಯೋಗ | - ಪೋಲಿಸ್ ಇನಸ್ಪೆಕ್ಟರ ಜೆಸ್ಕಾಂ |
| ವಾಸ ಸ್ಥಳ | - ಬೀದರ |

<u>ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ.</u>

ದಿನಾಂಕಃ 10.10.2013 ರಿಂದ 16.04.2016 ರವರೆಗೆ ಸವಣೂರು ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 29.08.2015 ರಂದು ಚಾಸಾ-12 ರವರಿಂದ ಈ ಪ್ರಕರಣದ ಕಡತವನ್ನು ಮುಂದಿನತನಿಖೆಗಾಗಿ ಪಡೆದುಕೊಂಡು, ಅದೇ ದಿನ ಚಾಸಾ-10 ಮತ್ತು 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಚಾಸಾ-12 ರವರು ನಮ್ಮ ಠಾಣೆಯಲ್ಲಿ ಎ ಎಸ್ ಐ ಆಗಿದ್ದರು. ಅವರ ಸಹಿ ಗಳನ್ನು ನಾನು ನೋಡಿದ್ದೇನೆ, ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ, ಅವರು ಮರಣ ಹೊಂದಿರುತ್ತಾರೆ. ಚಾಸಾ-12 ರವರು, ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಪ್ರ.ವ.ವರದಿಯನ್ನು ದಾಖಲಿಸಿರುತ್ತಾರೆ. ಅವರು ಚಾಸಾ-4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ.

ಈಗ ನಾನು ನೋಡುತ್ತಿರುವ ದಾಖಲೆ ಚಾಸಾ-12 ರವರು ದಾಖಲಿಸಿರುವ ಪ್ರ.ವ.ವರದಿಯಾಗಿರುತ್ತದೆ. ಅದರ ಮೇಲೆ ಅವರ ಸಹಿ ಇದೆ. ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ದಾಖಲೆ ಚಾಸಾ-1 ರವರು ಚಾಸಾ-12 ರವರಿಗೆ ನೀಡಿದ ದೂರಾಗಿರುತ್ತದೆ. ಅದರ ಮೇಲೆ ಅವರ ಸಹಿ ಇದೆ. ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಚಾಸಾ-12 ರವರ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಆರ್ ಬಿ ವಕೀಲರು ಮದ್ಯಾಹ್ಞ 1.00 ಗಂಟೆಯವರೆಗೆ ಕಾಲಾವಕಾಶ ಕೋರಿರುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.

ಮದ್ಯಾಹ್ಞ 1.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಕೆ ವಕೀಲರಿಂದಃ

ಚಾಸಾ-10 ಮತ್ತು 11 ರವರನ್ನು ಮೌಖಿಕವಾಗಿ ಕರೆಯಿಸಿ ಹೇಳಿಕೆ ಪಡೆದುಕೊಂಡಿರುತ್ತೇನೆ. ನಾನು ಅದೇ ದಿನ ಅಧಿಕಾರವಹಿಸಿಕೊಂಡಿದ್ದೆ ಎಂದರೆ ಸರಿ. ನಾನು ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರ.ವ.ವರದಿಯಲ್ಲಿರುವ ಆರೋಪಿದಂತೆ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.